## ಕವಿತೆ



ಶೇಕ್ಷಾವಲಿ ಅಯ್ಯನಹಳ್ಳಿ

ಕಲೆ: ರೂಪಶ್ರೀ ಕಲ್ಲಿಗನೂರು



# ಒಂದು ಹೆಣ್ಣು ಇರುವೆ

ಒಂದು ಹೆಣ್ಣು ಇರುವೆ
ನೀರು ಹುಡುಕುತ್ತಿದೆ
ಯಾರ ಒಡಲು ಬರಿದಾಗಿರುವುದೋ
ಅಲ್ಲೆಲ್ಲಾ ನೀರಿನ ಝರಿಗಳಂತೆ
ಸಕ್ಕರೆ ಸಿಕ್ಕಷ್ಟು ಸುಲಭಕ್ಕೆ ಪಾನಕ
ಸಿಗುವುದಿಲ್ಲ
ಇರುವೆಗೆ ಪಾತಾಳಕ್ಕೆ ಹೊಕ್ಕಿದರೂ

ಕಾಲದ ಗಾಯ ಆರುವುದಿಲ್ಲ
ಕುಂಟುತ್ತಾ ಬಿಂದಿಗೆ ತರುವುದು
ಇರುವೆಗೆ ಕೊಟ್ಟ ಶಾಪ
ಎದೆಯ ನೆಲ ಕುದಿಕುದಿದು ಹೂ ಅರಳಿಸುತ್ತದೆ
ಹೆಣ್ಣು ಇರುವೆಗೆ ಲೋಕಸಂದರ್ಶನ
ಕಾಮ ಉಕ್ಕುವುದು ನೆಲದಲ್ಲಿ ಮಾತ್ರ

ಡಿಜಿಟಲೈಜೆಡ್ ಇರುವೆ ಇದು
ಬ್ರೆಡ್ಡು ಬದುಕು ಸರಕಾದರೂ
ಹಸಿವು ನಿಲ್ಲದು
ಇರುವೆಗಳಿಗೆ ಮಾತ್ರ ಕಾಯ್ದೆಯಂತೆ
'ಹೂ' ಕುರಿತು
ಪ್ರಜ್ಞೆಯ ಗುಮಾನಿ ಇರುವೆಗಳಿಗೆ

ಆಟ ಸಾಮಾನುಗಳು ಕೂಡ
ತುಟ್ಟಿ
ಸಮಾಧಿಯ ಮೇಲೆ ಚಳವಳಿ ಕೂತ
ಇರುವೆಗಳಿಗೆ
ಚರಿತ್ರೆಯೊಂದಿಗಿನ ಅನುವಂಶೀಯತೆ
ಚಿತ್ರ ಗೀಚಲಾದ
ಎಲೆಯ ಮೇಲೆ
ಇರುವೆ ಸಾಲು ಗುರುತು ಮೂಡಿದೆ

ಇರುವೆಗಳೆಲ್ಲಾ
ಪಲಾಯನಗೊಂಡಿದ್ದುವು
ಹೆಣ್ಣು ಇರುವೆ
ನೆಲದಿಂದ ಬಿಸಿಗೊಂಡು
ನೆಲದಲ್ಲಿ ಮತ್ತೆ ಇರುವೆಯಾಯಿತು

ನೆಲ
ಇರುವೆ
ನೋವುಂಡಿತ್ತು